**ಸೂರ್ಯತೇಜರು ಹೆಂಡತಿಯನ್ನು ಕಂಡೊಡನೆ ಅವರ ಕಣ್ಣಲ್ಲಿ ಹೊಳೆಯುತ್ತಿದ್ದ ಅಗಾಧ ಪ್ರೀತಿಯನ್ನು ಸೂರಿ ಗುರುತಿಸಿದ. ಅದೆಷ್ಟೋ ವರುಷಗಳ ಬಳಿಕ ಸೇರಿದ ಪ್ರೇಮಿಗಳಂತೆ ಪರಸ್ಪರ ಆಲಿಂಗಿಸಿಕೊಂಡರು.**

"ಅವರು ಈ ಊರಿಗೆ ಬಂದಿದ್ದನ್ನು ನಾನು ಇಷ್ಟುವರ್ಷಗಳಲ್ಲಿ ನೋಡಿಯೇ ಇಲ್ಲ!" ಎಂದು ಆಶ್ಚರ್ಯದಿಂದ ಸೂರಿ ಅವರತ್ತ ನೋಡಿದ.

ಈತ ಎಲ್ಲವನ್ನೂ ತನಿಖೆ ಮಾಡುತ್ತಿದ್ದಾನೆ ಎಂದೆನಿಸಿತು. ಅದನ್ನು ತೋರ್ಪಡಿಸದೆ "ಇಲ್ಲ, ಅವಳು ಇಲ್ಲಿಗೆ ಬಂದಿಲ್ಲ. ಅವಳ ತಾಯಿ ಮನೆಗೆ ಬರುತ್ತಾಳೆ. ಆಗ ನಾನೇ ಹೋಗಿದ್ದು ಬರುತ್ತೇನೆ. ನಿನಗೇ ಗೊತ್ತಲ್ಲ, ವರ್ಷಕ್ಕೊಮ್ಮೆ ಊರಿಗೆ ಹೋಗಿ ಬರುವುದು" ಎಂದು ಮತ್ತೆ ಮೌನವಹಿಸಿದರು.

ಸೂರಿಗೆ ತಾನು ಈ ರೀತಿ ಕೇಳುತ್ತಿರುವುದು ಸರಿಯಲ್ಲವೆನಿಸಿತು. 'ಊರವರು ಸುಮ್ಮನೆ ಇವರ ಬಗ್ಗೆ ಕೆಟ್ಟ ಮಾತುಗಳನ್ನಾಡುತ್ತಿದ್ದಾರೆ' ಎಂದುಕೊಂಡು ಮರು ಮಾತಾಡದೆ ಅಲ್ಲಿಂದ ಹೊರಟ.

★★★

ಮತ್ತೆ ಐದಾರು ವರುಷಗಳು ಕಳೆದಿವೆ. ಸೂರ್ಯತೇಜರಿಂದಾಗಿ ಭಾವಬಿಂಬ ರಂಗ ಶಿಕ್ಷಣ ಕೇಂದ್ರ ಉನ್ನತಿಯ ಹಂತವನ್ನು ತಲುಪಿದೆ. ಅದೆಷ್ಟೋ ನಟರು ಇವರಿಂದ ತರಬೇತಿ ಪಡೆದು ಪ್ರಸಿದ್ಧರಾಗಿದ್ದಾರೆ. ಸೂರಿಯೂ ಉತ್ತಮ ನಟನಾಗಿ ಬೆಳೆದಿದ್ದಾನೆ. ಅದೆಷ್ಟೋ ಬಾರಿ ಸೂರ್ಯತೇಜರ ಮನೆಯಲ್ಲಿ ಉಳಿದುಕೊಂಡದ್ದೂ ಇದೆ. ಒಮ್ಮೆ ಸೂರಿ, "ಹೀಗೆ ಒಬ್ಬರೇ ಇರುವ ಬದಲು ಇನ್ನಾದರೂ ನೀವು ಹೆಂಡತಿಯನ್ನು ಇಲ್ಲಿಗೆ ಕರೆಸಿಕೊಂಡು ಇರಿ. ಬೇಕಾದರೆ ಪೇಟೆಯಲ್ಲಿಯೇ ಮನೆಯೊಂದನ್ನು ನೋಡಿ ಇರಬಹುದಲ್ಲ. ಒಬ್ಬರೇ ಎಷ್ಟು ದಿನ ಅಂತ ಇರುತ್ತೀರಿ?" ಎಂದುದಕ್ಕೆ, "ಮುಂದಿನ ವರುಷ ಬರುತ್ತಾಳೆ" ಎಂದಿದ್ದರು. ಇದನ್ನು ಹೇಳಿ ಇನ್ನು ಒಂದು ವಾರ ದಾಟಿತೆಂದರೆ ಒಂದು ವರುಷ ಮುಗಿದು ಹೋಗುತ್ತದೆ. ಈ ಮಧ್ಯೆ ತಾವೇ ಬರೆದ ನಾಟಕ 'ವಿಷಾದ'ದ ಪ್ರದರ್ಶನಕ್ಕಾಗಿ ಮೂರುತಿಂಗಳಿನಿಂದ ಸತತವಾಗಿ ತರಬೇತಿ ನೀಡಿ, ನಿರ್ದೇಶಿಸುವುದರಲ್ಲೇ ಮುಳುಗಿ ಹೋಗಿದ್ದಾರೆ. ವಯಸ್ಸು ಐವತ್ತೈದು ದಾಟಿದ್ದರೂ ಅವರ ಉತ್ಸಾಹವನ್ನು ನೋಡಿಯೇ ಎಲ್ಲರೂ ಉತ್ಸಾಹಭರಿತರಾಗುತ್ತಾರೆ.

★★★

ಈ ನಾಟಕದ ಕೊನೆಯ ಅಂಕ ಸರಿಯಾಗುತ್ತಿಲ್ಲವೆಂಬ ಬೇಸರ ಸೂರ್ಯತೇಜರನ್ನು ಅತಿಯಾಗಿ ಕಾಡುತ್ತಿತ್ತು. ಕಟ್ಟೆಯಲ್ಲಿ ಕುಳಿತು ಮತ್ತೆ ಯೋಚನೆಯಲ್ಲಿ ತೊಡಗಿದ್ದ ಸೂರ್ಯತೇಜರನ್ನು ನೋಡಿ ಸೂರಿಗೆ ಬೇಸರವಾಯಿತು. "ನಡೀರಿ... ಮನೆಗೆ ಹೋಗಿ. ನಾನಿವತ್ತು ನಿಮ್ಮ ಮನೆಗೆ ಬರುತ್ತೇನೆ. ಇಲ್ಲೆ ಹೊಟೇಲಿನಲ್ಲಿ ಊಟ ಮಾಡಿ ಹೋಗೋಣ" ಎಂದು ಅವಸರಿಸಿದ.

ಸೂರ್ಯತೇಜರಿಗೆ 'ನನಗೆ ಇಂದು ನಿದ್ದೆ ಬರುವುದಿಲ್ಲ. ಸ್ವಲ್ಪ ಹೊತ್ತು ಮಾತಾಡಿಯಾದರೂ ಕಾಲಹರಣ ಮಾಡಿದರಾಯಿತು' ಎಂದುಕೊಳ್ಳುತ್ತ, "ಸರಿ... ಬಾ ಹೋಗೋಣ" ಎಂದರು.

★★★

ಮನೆಗೆ ಬಂದವರೇ ಹಣ್ಣುಗಳನ್ನು ಹೆಚ್ಚಿ ಟೇಬಲ್ಲಿನ ಮೇಲಿಟ್ಟರು.

"ಸೂರಿ... ಹಣ್ಣನ್ನು ತೆಗೆದುಕೋ..."

"ಏನು? ಇಷ್ಟೊಂದು ಹಣ್ಣು?"